## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 510 |
| ಸದಸ್ಯರ ಹೆಸರು | : | ಶ್ರೀ ಐವನ್ ಡಿ'ಸೋಜ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾಗಿದ ದಿನಾಂಕ | : | 11.03.2025 |
| ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 24/7 ನೀರು ಸರಬರಾಜು ಮಾಡಲು ಜಲಸಿರಿ ಯೋಜನೆ ಕಾಮಗಾರಿ ಪ್ರಗತಿಯಲ್ಲಿದ್ದು ಈ ಕಾಮಗಾರಿಗೆ ತಗಲುವ ವೆಚ್ಚ ಎಷ್ಟು; | ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ 24/7 ನೀರು ಸರಬರಾಜು ಮಾಡಲು ಜಲಸಿರಿ ಯೋಜನೆ ಕಾಮಗಾರಿ ಪ್ರಗತಿಯಲ್ಲಿದ್ದು, ಸರ್ಕಾರದ ಆದೇಶ ಸಂಖ್ಯೆ: ನಅಇ 159 ಪಿಆರ್‌ಜೆ 2023 ದಿನಾಂಕ:02.01.2024 ರಲ್ಲಿ ಅನುಮೋದನೆಗೊಂಡಂತೆ ಕಾಮಗಾರಿಗೆ ರೂ.617.22 ಕೋಟಿಗಳ ವೆಚ್ಚವಾಗುತ್ತದೆ. |
| ಆ) | ಯಾವ ಯಾವ ಮೂಲಗಳಿಂದ ಹಣವನ್ನು ಸಂಗ್ರಹಿಸಲಾಗುತ್ತದೆ; ಕೇಂದ್ರ ಮತ್ತು ರಾಜ್ಯ ಸರ್ಕಾರದ ಪಾಲು ಎಷ್ಟು; (ವಿವರ ನೀಡುವುದು) | ಏಷಿಯನ್ ಅಭಿವೃದ್ಧಿ ಬ್ಯಾಂಕ್ ಸಾಲ ರೂ.280.07 ಕೋಟಿಗಳು, ರಾಜ್ಯ ಸರ್ಕಾರದ ಅನುದಾನ ರೂ.248.19 ಕೋಟಿಗಳು (ರೂ 114.00 ಕೋಟಿ ಸ್ಮಾರ್ಟ್ ಸಿಟಿ ಹೊಂದಾಣಿಕೆ ಮೊತ್ತ ಒಳಗೊಂಡಂತೆ), ಸ್ಥಳೀಯ ಸಂಸ್ಥೆಯ ವಂತಿಗೆ ರೂ.88.96 ಕೋಟಿಗಳು (ರೂ.11.00 ಕೋಟಿ KMF Milk Dairy, National Institute of Technology Karnataka (NITK) ಮಂಗಳೂರು ಹಾಗೂ ಇತರೆ ಸಗಟು ನೀರು ಬಳಕೆದಾರರ ವಂತಿಕೆ ಒಳಗೊಂಡಂತೆ) ಇರುತ್ತದೆ. |
| ಇ) | ಜಲಸಿರಿ ಮೂಲಕ ಕುಡಿಯುವ ನೀರಿನ ಎಷ್ಟು ಶುದ್ದೀಕರಣ ಘಟಕಗಳನ್ನು ಅಳವಡಿಸಲಾಗಿದೆ; ಲೀಟರ್ ಒಂದಕ್ಕೆ ತಗಲುವ ಖರ್ಚು ಎಷ್ಟು; | ಜಲಸಿರಿ ಯೋಜನೆಯಡಿ ಅಮೃತ್ ನೆರವಿನೊಂದಿಗೆ 20 ಎಂ.ಎಲ್.ಡಿ ಶುದ್ದೀಕರಣ ಘಟಕವನ್ನು ರೂ.20.00 ಕೋಟಿಗಳಲ್ಲಿ ಮತ್ತು ಎಡಿಬಿ ನೆರವಿನ 24/7 ಕಾಮಗಾರಿಯಲ್ಲಿ 125 ಎಂ.ಎಲ್.ಡಿ ನೀರು ಶುದ್ದೀಕರಣ ಘಟಕಗಳನ್ನು ರೂ.125.00 ಕೋಟಿಗಳಲ್ಲಿ ನಿರ್ಮಾಣ ಮಾಡಲಾಗುತ್ತಿದೆ. ಮಂಗಳೂರು ನಗರದಲ್ಲಿ ಜಲಸಿರಿ ಯೋಜನೆಯಡಿ 30 ವರ್ಷಗಳಿಗೆ ವಿನ್ಯಾಸಗೊಳಿಸಿ ಹೊಸದಾಗಿ 145 ಎಂ.ಎಲ್.ಡಿ ಸಾಮರ್ಥ್ಯದ ನೀರು ಶುದ್ದೀಕರಣ ಘಟಕ ನಿರ್ಮಾಣ ಮಾಡಲು ರೂ145.00 ಕೋಟಿ ವೆಚ್ಚ ಮಾಡುತ್ತಿದ್ದು, ನಿರ್ಮಾಣ ವೆಚ್ಚ ಪ್ರತಿ ಲೀಟರ್ ಗೆ ರೂ.10 ಇರುತ್ತದೆ ಎಂದು ಅಂದಾಜಿಸಲಾಗಿದೆ. |

| | | |
|---|---|---|
| ಈ) | ಈ ಯೊಜನೆಗಾಗಿ ಹಣದ ಸಂಪನ್ಮೂಲಗಳನ್ನು ಯಾವ ಮೂಲಗಳಿಂದ ಸಂಗ್ರಹಿಸಲಾಗುತ್ತದೆ; ಬಳಕೆದಾರರ ಮೇಲೆ ಹೆಚ್ಚಿನ ಹೊರೆ ಹಾಕಲಾಗಿದೆಯೇ; (ವಿವರ ನೀಡುವುದು) | ಏಷಿಯನ್ ಅಭಿವೃದ್ಧಿ ಬ್ಯಾಂಕ್ ಸಾಲ ರೂ.280.07 ಕೋಟಿ, ರಾಜ್ಯ ಸರ್ಕಾರದ ಅನುದಾನ ರೂ.248.19 ಕೋಟಿ (ರೂ 114.00 ಕೋಟಿ ಸ್ಮಾರ್ಟ್ ಸಿಟಿ ಹೊಂದಾಣಿಕೆ ಮೊತ್ತ ಒಳಗೊಂಡಂತೆ), ಸ್ಥಳೀಯ ಸಂಸ್ಥೆಯ ವಂತಿಗೆ ರೂ.88.96 ಕೋಟಿ (ರೂ.11.00 ಕೋಟಿ KMF Milk Dairy, National Institute of Technology Karnataka (NITK) ಹಾಗೂ ಇತರೆ ಸಗಟು ನೀರು ಬಳಕೆದಾರರ ವಂತಿಕೆ ಒಳಗೊಂಡಂತೆ) ಇರುತ್ತದೆ. ಜಲಸಿರಿ ಯೋಜನೆಯಲ್ಲಿ ನಿರ್ಮಾಣದ ವೆಚ್ಚವನ್ನು ಬಳಕೆದಾರರಿಂದ ಪಡೆಯುವುದಿಲ್ಲ. |
| ಉ) | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕುಡಿಯುವ ನೀರಿಗಾಗಿ ಸರಬರಾಜುನಿಂದ ನಗರಪಾಲಿಕೆಗೆ ಇರುವ ಆದಾಯ ಎಷ್ಟು; ಒಟ್ಟು ವಾರ್ಷಿಕ ಆದಾಯ, ತಗಲುವ ಖರ್ಚು ಹಾಗೂ ಉಳಿತಾಯ ಎಷ್ಟು ?(ವಿವರ ನೀಡುವುದು) | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸರಬರಾಜುನಿಂದ ನಗರಪಾಲಿಕೆಗೆ ಇರುವ ವಾರ್ಷಿಕ ಆದಾಯ ತಗಲುವ ವೆಚ್ಚ ಹಾಗೂ ಉಳಿತಾಯದ ವಿವರಗಳು ಈ ಕೆಳಗಿನಂತಿದೆ: |

| ವರ್ಷ | ಆದಾಯ | ಖರ್ಚು | ಉಳಿತಾಯ |
|---|---|---|---|
| 2023-24 | 49.77 | 21.60 | 28.17 |
| 2024-25 (ಫೆಬ್ರುವರಿ ಅಂತ್ಯಕ್ಕೆ) | 43.51 | 17.69 | 25.82 |

ಕಡತ ಸಂಖ್ಯೆ:ನಅಇ 42 ಪಿಆರ್‌ಜೆ 2025

**(ಬಿ. ಎಸ್. ಸುರೇಶ)**

ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು